ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ದೇವನಹಳ್ಳಿ

ಸಿ.ಸಿ.ನಂಬರು ಃ 5745 / 2016

ಪಿರ್ಯಾದಿ ಃ ಶ್ರೀಧರ.ವಿ

ವಿರುದ್ಧ

ಆರೋಪಿ ಃ ಲಲಿತ.ಬಿ ಕೋಂ ಮುನಿರಾಜ.ಎ
32 ವರ್ಷ, ವಾಸ ಃ ನಂ.19/1,
ಬೆಟ್ಟಹಲಸೂರು, ನೆಲ್ಲಕುಂಟೆ,
ಬೆಟ್ಟಹಲಸೂರು ಪೋಸ್ಟ್,
ಬೆಂಗಳೂರು ಉತ್ತರ ತಾಲ್ಲೂಕು.

ಆಪಾದನೆ

ನೀವು ಪಿರ್ಯಾದಿದಾರರಾದ ಶ್ರೀಧರ.ವಿರವರು ಪರಿಚಯಸ್ತರಾಗಿದ್ದು, ನೀವು ನಿಮ್ಮ ಆರ್ಥಿಕ ಅಡಚಣೆಗಾಗಿ ಕೈಗಡವಾಗಿ ಪಿರ್ಯಾದಿದಾರರಿಂದ ರೂ.2,60,000-00 ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ದಿನಾಂಕ 15-07-2016 ರಂದು ಚೆಕ್ಕು ನಂ.284871 ನ್ನು ರೂ.2,60,000-00 ಗಳಿಗೆ, ನಿಮ್ಮ ಖಾತೆ ಇರುವ ಬ್ಯಾಂಕ್ ಆಫ್ ಇಂಡಿಯಾ, ಹುಣಸಮಾರನಹಳ್ಳಿ ಶಾಖೆಯ ಚೆಕ್ಕು ನೀಡಿದ್ದು, ಸದರಿ ಚೆಕ್ಕು ನಗದೀಕರಣಕ್ಕಾಗಿ ಪಿರ್ಯಾದಿದಾರರು ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹುಣಸಮಾರನಹಳ್ಳಿ ಶಾಖೆಯ ಮೂಲಕ ನಗದೀಕರಣಕ್ಕಾಗಿ ಸಲ್ಲಿಸಿದಾಗ ಅದು “ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ” ಎಂಬ ಕಾರಣಕ್ಕೆ ಹಿಂಬರಹದೊಂದಿಗೆ ನಗದಾಗದೇ ವಾಪಸ್ಸಾಗಿದ್ದು ನಂತರ ಪಿರ್ಯಾದಿದಾರರು ತಮಗೆ ದಿನಾಂಕ 28-07-2016 ರಂದು ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ಜಾರಿಯಾಗಿದ್ದು, ಸದರಿ ನೋಟೀಸಿಗೆ ಜವಾಬಾಗಲೀ, ಚೆಕ್ಕಿನ ಬಾಬ್ತು ಹಣವನ್ನು ನೀಡಿರುವುದಿಲ್ಲ ನೀವು ವರ್ಗಾವಣೀಯ ಲಿಖಿತ ಕಾಯ್ದೆಯ ಕಲಂ 138 ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿದ್ದು ನನ್ನ ಸಂಜ್ಞೆಯಲ್ಲಿದೆ.

ಆದುದರಿಂದ ಆರೋಪಿಯಾದ ನಿಮ್ಮ ವಿರುದ್ದ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ.

**ಪ್ರಶ್ನೆ-1 ಃ ಈಗ ನಿಮಗೆ ಓದಿ ಹೇಳಿ ವಿವರಿಸಿದಂತಹ ಆಪಾದನೆ ನಿಮಗೆ ಅರ್ಥವಾಗಿದೆಯೇ?**

**ಉತ್ತರ ಃ**

**ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?**

**ಉತ್ತರ ಃ**

**ದಿನಾಂಕ 22ನೇ ಅಕ್ಟೋಬರ್ ಮಾಹೇ 2019 ರಂದು**

**(ಯೋಗೇಶ್ವರಿ)**
**ಅಪರ ಸಿವಿಲ್‌ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ದೇವನಹಳ್ಳಿ.**